ನಂಬುತ್ತಿರಲಿಲ್ಲ, ತನ್ನ ತಂದೆಗೆ ಫೋನ್ ಮಾಡುತ್ತಿರಲಿಲ್ಲ. ಆದ್ದರಿಂದ ಅವನ ಬಯಕೆಗೆ ಒಪ್ಪಿಕೊಳ್ಳಬೇಕಾಯ್ತು'

ಸಣ್ಣದೊಂದು ವಿಸ್ಫೋಟ ಆದ ಹಾಗೆ... ಆ ನಂತರ ಗಾಢವಾದ ನಿಶ್ಯಬ್ದ ಆವರಿಸಿದ ಹಾಗೆ, ಅಲ್ಲೊಂದು ಇರುಸು ಮುರಿಸಿನ ವಾತಾವರಣ ಸೃಷ್ಟಿಯಾಯಿತು.

ಕೃಷ್ಣ ಸ್ತಬ್ದವಾಗಿ ಅವಳನ್ನೇ ನೋಡುತ್ತ ಕುಳಿತಿದ್ದನು.

ಅವಳು ಮುಂದುವರೆಸಿದಳು. 'ನನ್ನ ತಂದೆಗಾಗಿ, ಏನು ಬೇಕಾದರೂ ಮಾಡುತ್ತೇನೆ ಎನ್ನುವ ವಿಷಯ ನಿಮಗೂ ತಿಳಿದಿದೆ. ಹಾಗಾಗಿ ಅವನಿಗೆ 'ನೊ' ಎಂದು ಹೇಳಿ ಅನುಮಾನ ಬರುವ ಹಾಗೆ ನಡೆದುಕೊಳ್ಳದೆ ಹೋದೆ. 'ರಾಜೀ' ಎಂಬ ಸಿನಿಮಾದಲ್ಲಿ ಪಾಕಿಸ್ತಾನೀ ಸೈನ್ಯಾಧಿಕಾರಿಯಿಂದ ಗರ್ಭಿಣಿಯಾದ ಹೀರೋಯಿನ್ 'ದೇಶಕ್ಕಿಂತ ಯಾವುದೂ ಮುಖ್ಯವಲ್ಲ' ಎಂದು ತನ್ನಪ್ಪನಿಗೆ ಹೇಳುತ್ತಾಳೆ. ನನ್ನ ವಿಷಯವೂ ಅಷ್ಟೇ. ತಂದೆಗಿಂತ ನನಗೆ ಯಾವುದೂ ಮುಖ್ಯವಲ್ಲ' ಎಂದು ಕ್ಷಣಹೊತ್ತು ತಡೆದು 'ಈಗಲೂ ನೀವು ಮದುವೆ ಆಗುವುದಾದರೆ ನಿಮ್ಮಿಷ್ಟ' ಎಂದಳು.

ವೇಟರ್ ಬಿಲ್ ತಂದು ಟೇಬಲ್ ಮೇಲಿಟ್ಟನು.

ವೇಟರ್ ಹೋದ ಮೇಲೆ ಕಲ್ಯಾಣಿಗೆ ಹೇಳಿದನು 'ನಾವಿಬ್ಬರೂ ಸೇರಿ ಆಪರೇಷನ್ 'ಮಿನ್ನಾಗು'ನಲ್ಲಿ ಪಾಲ್ಗೊಂಡೆವು. ಅದರಲ್ಲಿ ನಿಮಗೊಂದು ಸಣ್ಣ ಆಕ್ಸಿಡೆಂಟ್ ಆಯಿತು. ಒಂದು ಕೆಲಸ ಮಾಡುತ್ತಿರುವಾಗ ಗ್ರೂಪ್‌ನ ಒಬ್ಬರಿಗೆ ಅಪಾಯವಾದರೆ ಉಳಿದವರು ಆ ವ್ಯಕ್ತಿಯನ್ನು ಅಲ್ಲೇ ಬಿಟ್ಟು ಹೋಗುವುದಿಲ್ಲ. ನಿಮ್ಮ ವಿಷಯದಲ್ಲೂ ನಡೆದಿದ್ದು ಅದೇನೇ... ಸಣ್ಣ ಆಕ್ಸಿಡೆಂಟ್... ನಡೆದಿದ್ದನ್ನು ಮರೆತು ಬಿಡಿ. ಮತ್ತೆ ಹೇಳುತ್ತಿದ್ದೇನೆ. ನೀವು ಒಪ್ಪಿಕೊಂಡರೆ ನನ್ನಷ್ಟು ಅದೃಷ್ಟವಂತ ಯಾರೂ ಇರುವುದಿಲ್ಲ. ತಂದೆಗಾಗಿ ನೀವು ತೆಗೆದುಕೊಂಡ ರಿಸ್ಕ್‌ಗೆ, ಅವರ ಮೇಲೆ ನಿಮಗಿರುವ ಪ್ರೀತಿಗೆ ಹ್ಯಾಟ್ಸ್ ಆಫ್. ಅದರಲ್ಲಿ ನನ್ನನ್ನು ಅರ್ಧದಷ್ಟು ಪ್ರೀಯಿಸಿ ಸಾಕು' ಎಂದನು.

ಅವನ ಕಡೆಗೆ ರೆಪ್ಪೆ ಬಡಿಯದೆ ನೋಡುತ್ತಿದ್ದಳು ಕಲ್ಯಾಣಿ.

ನಿಧಾನವಾಗಿ ಅವಳ ಮುಖದ ಮೇಲೆ ಕಿರುನಗೆ ಮೂಡಿತು. 'ಥ್ಯಾಂಕ್ಸ್ ಕೃಷ್ಣಾ... ನಾನು ಸುಳ್ಳು ಹೇಳಿದೆ, ಆ ರಾತ್ರಿ ಏನೂ ನಡೆಯಲಿಲ್ಲ... ಅವನು ಪ್ರಯತ್ನಿಸಿದ ಅಷ್ಟೇ ಆದರೆ....'

ಆದರೆ?'

'ಭಗವಂತ ಇದ್ದಾನೆಂದು ಪ್ರಕೃತಿ ಸಹಕರಿಸಿತು ಎಂದೂ ದೊಡ್ಡ ದೊಡ್ಡ ಮಾತನಾಡಲಾರೆ, ಆದರೆ ಅವನ ಆಸೆ ನೆರವೇರುವ ಕೊನೆಯ ಕ್ಷಣದಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು, ಆದ್ದರಿಂದ ಸೇಫ್ ಆಗಿಬಿಟ್ಟೆ'

ಅವನು ನಿಧಾನವಾಗಿ ಉಸಿರೆಳೆದುಕೊಂಡು 'ಮತ್ತ್ಯಾಕೆ ಹಾಗೆ ಹೇಳಿದಿರಿ?' ಎಂದು ಕೇಳಿದನು.

'ನಾಳೆ ನಮ್ಮ ಮದುವೆಯಾದ ಮೇಲೆ ನೀವು ಮತ್ತೆ ಮತ್ತೆ 'ಎರಡು, ಮೂರು ದಿನ ಅವನ ಜೊತೆ ಕಾಡಿನಲ್ಲಿದ್ದೆಯಲ್ಲ, ಆಗವನು ಪ್ರಯತ್ನಿಸಲಿಲ್ಲವಾ? ನಿನ್ನ ಮೇಲೆ ಕೈ ಹಾಕಲಿಲ್ಲವಾ?' ಅಂತ ಅನುಮಾನ ಪಟ್ಟು ನೋಯಿಸದ ಹಾಗೆ ಲಿಟ್ಮಸ್ ಟೆಸ್ಟ್ ಮೊದಲೇ ಮಾಡಿಕೊಂಡರೆ ಒಳ್ಳೆಯದಲ್ಲವೇ?' ಎಂದು ನಕ್ಕಳು.

ಅವನೂ ಮನಸ್ಫೂರ್ತಿ ನಕ್ಕನು.

'ಮಂಗಳ ವಾದ್ಯಗಳು ಮೊಳಗಿದವು. ಪ್ರಕೃತಿ ಪುಳಕಿತಗೊಂಡಿತ್ತು. ಪಕ್ಷಿಗಳು ಕಲರವದೊಂದಿಗೆ ನವದಂಪತಿಗೆ ಆಶೀರ್ವಾದ ಮಾಡಿದವು' ಎಂದೆಲ್ಲ ಬರೆದರೆ ಹಾಸ್ಯಾಸ್ಪದವಾಗಿರುತ್ತದೆ, ಏಕೆಂದರೆ ಅವರಿನ್ನೂ ಆ ಹೋಟೆಲ್‌ನಲ್ಲೇ ಕುಳಿತಿದ್ದಾರೆ ಅದಕ್ಕೆ!

**ಮುಗಿಯಿತು**

ಪ್ರತಿಕ್ರಿಯಿಸಿ: feedback@sudha.co.in

---

## ಸವಿತಾ ಶ್ರೀನಿವಾಸ ಅವರ ಹೊಸ ಧಾರಾವಾಹಿ

# ತ್ರಿಲೋಕ ಸಂಚಾರಿ ನೀರೆ



### ಅರೆ ಮಾನವರು ದಂಗೆ ಏಳುತ್ತಿದ್ದಾರೆ...

ತಂತ್ರಜ್ಞಾನವನ್ನು ನೆಚ್ಚಿದ ಈ ಯುಗದ ಮುಂದಿನ ದಿನಗಳು ಹೇಗಿರಬಹುದು? ಈ ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾಳೆ 'ತ್ರಿಲೋಕ ಸಂಚಾರಿ ನೀರೆ'. ಮಾನವರು ಹಾಗೂ ಯಂತ್ರ ಮಾನವರ ಜಗತ್ತಿನಲ್ಲಿ ಅರೆ ಮಾನವರು ತಮ್ಮ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟದ ವಿಶಿಷ್ಟ ಕಥನ ಈ ಕಾದಂಬರಿ. ಅಂದಹಾಗೆ, ಈ ಅರೆ ಮಾನವರು ಯಾರು? ಯಾವ ಕಾರಣಕ್ಕಾಗಿ ಅವರ ಸಂಘರ್ಷ? ಈ ಸಂಘರ್ಷದಲ್ಲಿ ರೋಬೊಗಳ ಪಾತ್ರವೇನು?

ಭವಿಷ್ಯದಲ್ಲಿ ಎದುರಾಗಬಹುದಾದ ಸಂಘರ್ಷ, ರೋಬೊಗಳ ನಡುವೆ ಮನುಷ್ಯರೂ ಯಂತ್ರ ಮಾನವರಂತಾದ ದಿನಗಳಲ್ಲೂ ಟಿಸಿಲೊಡೆವ ಬೆಚ್ಚನೆ ಪ್ರೇಮಕಥೆ – ಓದುಗರು ಅಹುದಹುದೆನ್ನುವಷ್ಟು ಸಹಜವಾದ ಫ್ಯಾಂಟಸಿ ಕಥನ ಸವಿತಾ ಶ್ರೀನಿವಾಸ ಅವರದು.

**ಮುಂದಿನ ವಾರ ಆರಂಭ**